**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**

ವಿಧಾನ ಸೌಧ, ಬೆಂಗಳೂರು– 560 001

ದೂರವಾಣಿ ಸಂ: 080–22359562/ 22359563 (ಶಾಸಕರ ಭವನ)

**ಬೆಂಗಳೂರಿನ ಶಾಸಕರ ಭವನದ** ಕೊಠಡಿಗಳ ಉಪಯೋಗಕ್ಕಾಗಿ ಕಿಟಕಿ/ಬಾಗಿಲ ಪರದೆಗಳು, ಕುಷನ್ ಹಾಗೂ ಕುಷನ್ ಕವರ್‌ಗಳನ್ನು ಖರೀದಿಸಲು **ಆನ್‌ಲೈನ್‌ಟೆಂಡರ್**

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

https://eproc.karnataka.gov.in

**ಬಿಡ್ಡಿಂಗ್‌ದಾಖಲಾತಿ– ದ್ವಿಲಕೋಟೆ ಪದ್ಧತಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಬೆಂಗಳೂರು– 560 001

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**

ವಿಧಾನ ಸೌಧ, ಬೆಂಗಳೂರು- 560 001

ದೂರವಾಣಿ ಸಂ: 080-22359562/ 22359563 (ಶಾಸಕರ ಭವನ)

ಸಂಖ್ಯೆ: ಕೆಎಲ್‌ಸಿ/ಶಾಸೌ/790/2019-20, ದಿ:28.08.2020

**<u>ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ</u>**

ಶಾಸಕರ ಭವನದ ಕೊಠಡಿಗಳ ಉಪಯೋಗಕ್ಕಾಗಿ 560 ಕಿಟಕಿ ಪರದೆ, 512 ಬಾಗಿಲ ಪರದೆ, 3 ಸೀಟಿನ ಸೋಫಾ ಸೆಟ್‌ಗೆ 492 ಕುಷನ್ ಮತ್ತು ಕುಷನ್ ಕವರ್‌ಗಳು ಹಾಗೂ 167 ಒಂದು ಸೀಟಿನ ಸೋಫಾ ಸೆಟ್‌ಗೆ 334 ಕುಷನ್ ಹಾಗೂ ಕುಷನ್ ಕವರ್‌ಗಳನ್ನು ಖರೀದಿಸಲು ದ್ವಿ-ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಬಿಡ್ಡ್ ದಾಖಲಾತಿಗಳು ದಿನಾಂಕ:28.08.2020 ರಿಂದ 14.09.2020ರವರೆಗೆ https://eproc.karnataka.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಆಸಕ್ತ ಬಿಡ್‌ದಾರರು ಬಿಡ್ ದಾಖಲಾತಿಗಳನ್ನು ಅದರಲ್ಲಿ ವೀಕ್ಷಿಸಬಹುದು, ಡೌನ್‌ಲೋಡ್ ಮಾಡಿಕೊಂಡು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಆನ್‌ಲೈನ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು **ಕೊನೆಯ ದಿನಾಂಕ:** 14.09.2020, **23.59ಗಂಟೆಗೆ.**

ಬಿಡ್‌ಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕು. ಟೆಂಡರ್ ಅಂಗೀಕಾರ ಪ್ರಾಧಿಕಾರವು ಯಾವುದೇ ಕಾರಣ ನೀಡದೇ ಟೆಂಡರ್ ಅನ್ನು ಸ್ವೀಕರಿಸುವ/ ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

ಅವಶ್ಯವಿದ್ದಲ್ಲಿ, ಆಸಕ್ತ ಬಿಡ್‌ದಾರರು ಶಾಸಕರ ಭವನದ ಆವರಣದಲ್ಲಿರುವ ಕೊಠಡಿಗಳನ್ನು ಬಿಡ್ ಸಲ್ಲಿಸುವ ಪೂರ್ವದಲ್ಲಿ ಸ್ಥಳ ಭೇಟಿ ಮಾಡಬಹುದು.

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**
ವಿಧಾನ ಸೌಧ, ಬೆಂಗಳೂರು- 560 001

## ಕಾರ್ಯಕ್ರಮಗಳ ವೇಳಾಪಟ್ಟಿ

**ಟೆಂಡರ್‌ಅಧಿಸೂಚನೆ ಸಂ:** ಕೆಎಲ್‌ಸಿ/ಶಾಸೌ/790/2019-20, ದಿ:28.08.2020

| ಕ್ರ.ಸಂ | ಕಾರ್ಯಕ್ರಮಗಳು | ದಿನಾಂಕ ಮತ್ತು ಸಮಯ |
|---|---|---|
| 1. | ಬಿಡ್‌ದಾರರು ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ | ದಿ:14.09.2020, 23.59_ಘಂಟೆ |
| 2. | ಬಿಡ್‌ದಾರರೊಂದಿಗಿನ ಪೂರ್ವಭಾವಿ ಸಭೆ | ದಿ:10.09.2020, ಮಧ್ಯಾಹ್ನ:12.00 ಘಂಟೆ<br>ಸ್ಥಳ: ಕೊಠಡಿ ಸಂಖ್ಯೆ 100,<br>ಶಾಸಕರ ಭವನ-1<br>ಬೆಂಗಳೂರು |
| 3. | ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿ:16.09.2020,11.30ಘಂಟೆ |
| 4. | ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿ:19.09.2020,11.30ಘಂಟೆ |

**ಸಂಪರ್ಕಕ್ಕಾಗಿ ವಿಳಾಸ:**

ಉಪ ಕಾರ್ಯದರ್ಶಿ,
ಶಾಸಕರ ಭವನ, ಬೆಂಗಳೂರು- 560 001
ದೂರವಾಣಿ: 080-22359563/22359562

# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ: ಕೆಎಲ್‌ಸಿ/ಶಾಸೌ/790/2019-20,

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ: 5079, ವಿಧಾನ ಸೌಧ,
ಬೆಂಗಳೂರು – 560 001, ದಿನಾಂಕ:. 28.08.2020.

## ಇ-ಟೆಂಡರ್ ಅಧಿಸೂಚನೆ

ವಿಷಯ: ವಿಧಾನ ಪರಿಷತ್ತಿನ ಶಾಸಕರ ಭವನ ಕೊಠಡಿಗಳ ಉಪಯೋಗಕ್ಕಾಗಿ ಕಿಟಕಿ/ಬಾಗಿಲ ಪರದೆಗಳು, ಕುಷನ್ ಹಾಗೂ ಕುಷನ್ ಕವರ್‌ಗಳನ್ನು ಸರಬರಾಜು ಮಾಡುವ ಬಗ್ಗೆ.

*****

1) **ಕೆಲಸದ ಉದ್ದೇಶ ಮತ್ತು ವ್ಯಾಪ್ತಿ:-**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವ್ಯಾಪ್ತಿಗೊಳಪಡುವ ಶಾಸಕರ ಭವನದಲ್ಲಿನ ಕೊಠಡಿಗಳಲ್ಲಿರುವ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕಿಟಕಿ/ಬಾಗಿಲ ಪರದೆಗಳು, ಕುಷನ್ ಹಾಗೂ ಕುಷನ್ ಕವರ್‌ಗಳನ್ನು ಖರೀದಿಸಲು ತೀರ್ಮಾನಿಸಲಾಗಿರುತ್ತದೆ.

2) **ಇ.ಎಂ.ಡಿ ಮತ್ತು ಇತರೆ ಮೊತ್ತ:-**

2.1 ಶಾಸಕರ ಭವನದಲ್ಲಿನ ಕೊಠಡಿಗಳಲ್ಲಿರುವ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕಿಟಕಿ/ಬಾಗಿಲ ಪರದೆಗಳು, ಕುಷನ್ ಹಾಗೂ ಕುಷನ್ ಕವರ್‌ಗಳನ್ನು ಸರಬರಾಜು ಮಾಡುವವರು ಇ-ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ವ್ಯಕ್ತಿ/ಸಂಸ್ಥೆಯು ರೂ.50 ಸಾವಿರ(ರೂಪಾಯಿ ಐವತ್ತು ಸಾವಿರಗಳು ಮಾತ್ರ) ಇ.ಎಂ.ಡಿ ಮೊತ್ತವನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿಸಿರುವ ರೀತ್ಯಾ ಪಾವತಿಸತಕ್ಕದ್ದು. ಈ ಇ.ಎಂ.ಡಿ ಮೊತ್ತಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.

2.2. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಯಶಸ್ವಿ ಬಿಡ್‌ದಾರರನ್ನು ಹೊರತುಪಡಿಸಿ ಉಳಿದ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಇ-ಪಾವತಿ ಮೂಲಕವೇ ಇ-ಪ್ರಕ್ಯೂರ್‌ಮೆಂಟ್ ವತಿಯಿಂದ ಮರು ಪಾವತಿಸಲಾಗುವುದು.

2.3. ಯಶಸ್ವಿ ಬಿಡ್‌ದಾರರ ಇ.ಎಂ.ಡಿ ಮೊತ್ತವನ್ನು ವಿಧಾನ ಪರಿಷತ್ ಸಚಿವಾಲಯಕ್ಕೆ ಸಾಮಾಗ್ರಿಗಳನ್ನು ಪೂರ್ಣ ಪ್ರಮಾಣದಲ್ಲಿ ತೃಪ್ತಿಕರವಾಗಿ ಸರಬರಾಜು ಮಾಡಿದ ನಂತರ ಹಿಂತಿರುಗಿಸಲಾಗುವುದು.

2.4. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಚಿಸುವವರು ಇ.ಎಂ.ಡಿ ಜೊತೆಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವತಿಯಿಂದ ವಿಧಿಸುವ ಇತರೆ ಮೊತ್ತವನ್ನು ಪಾವತಿಸಲು ಬದ್ಧರಿರತಕ್ಕದ್ದು.

3.**ಟೆಂಡರ್ ಸಲ್ಲಿಸುವಿಕೆ:-**

3.1. ಆಸಕ್ತ ಬಿಡ್‌ದಾರರು ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದೊಳಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ಟೆಂಡರ್ ಸಲ್ಲಿಸುವುದು.

3.2. ಎಲ್ಲಾ ದಾಖಲೆಗಳ ಪ್ರತೀ ಪುಟಕ್ಕೆ, ಬಿಡ್‌ದಾರರುಅಥವಾ ಸಂಸ್ಥೆಯಾಗಿದ್ದಲ್ಲಿ, ಅಧಿಕೃತವಾಗಿ ಸಹಿ ಮಾಡಲುಅಧಿಕಾರ ಹೊಂದಿರುವವರು ಸಹಿ ಮಾಡಿರತಕ್ಕದ್ದು.

3.3. ಟೆಂಡರ್‌ನ ಸ್ವೀಕೃತಿ ದಿನಾಂಕವನ್ನು ವಿಸ್ತರಿಸುವ ಅಥವಾ ಟೆಂಡರ್ ಪ್ರಕ್ರಿಯೆಯನ್ನು ರದ್ದು ಪಡಿಸುವ ಅಧಿಕಾರವನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹೊಂದಿರುತ್ತದೆ.

4.**ಟೆಂಡರ್ ಜೊತೆ ಸಲ್ಲಿಸಬೇಕಾದ ದಾಖಲೆಗಳು:-**

4.1. ಟೆಂಡರ್ ದಾಖಲೆಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬೇಕಾಗಿದ್ದು, ತಾಂತ್ರಿಕ ಬಿಡ್(Technical Bid) ಮತ್ತು ಆರ್ಥಿಕ ಬಿಡ್ (Financial Bid) ಗೆ ಸಂಬಂಧಿಸಿದ ದಾಖಲೆಗಳನ್ನು ಆಯಾ ಅಂಕಣದಲ್ಲಿ ಅಪ್‌ಲೋಡ್ ಮಾಡಿ ಬಿಡ್‌ಅನ್ನು ದಾಖಲಿಸತಕ್ಕದ್ದು.

4.2. ತಾಂತ್ರಿಕ ಬಿಡ್ ದಾಖಲೆ ಸಲ್ಲಿಸುವ ಭಾಗದಲ್ಲಿ ಆರ್ಥಿಕ ಬಿಡ್‌ಗೆ ಸಂಬಂಧಿಸಿದ ಯಾವುದೇ ಮಾಹಿತಿ ಸಲ್ಲಿಕೆಯಾಗಿದಲ್ಲಿ, ನಿಗಧಿತ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಮತ್ತುಅಪೂರ್ಣ ಮಾಹಿತಿಯುಳ್ಳ ಬಿಡ್‌ಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಬಿಡ್‌ಗಳನ್ನು ಅನರ್ಹವೆಂದು ಪರಿಗಣಿಸಲಾಗುವುದು.

5. **ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆಯಲು ಈ ಕೆಳಕಂಡ ಮೂಲ/ ದೃಡೀಕೃತ ದಾಖಲೆಗಳನ್ನು ಸಲ್ಲಿಸಬೇಕು:-**

5.1. ನಿಗಧಿತ ಇ.ಎಂ.ಡಿ. ಮೊತ್ತವನ್ನು ಪಾವತಿಸಿರುವ ಕುರಿತಾದ ದಾಖಲೆ.

5.2. ಇಂತಹ ಸಾಮಾಗ್ರಿಗಳನ್ನು ಸರ್ಕಾರಿ ಮತ್ತು ಇನ್ನಿತರೆ ಸಂಸ್ಥೆಗಳಿಗೆ ಕನಿಷ್ಟ ರೂ. 10 ಲಕ್ಷಗಳವರೆಗೆ ಸರಬರಾಜು ಮಾಡಿರುವುದಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರ, ಕಳೆದ ಮೂರು ವರ್ಷದ ಅವಧಿಗೆ ಆದಾಯ ತೆರಿಗೆ ಸಲ್ಲಿಸಿದ ಪ್ರತಿ, ಜಿ.ಎಸ್.ಟಿ. ನೋಂದಣಿ ಪ್ರಮಾಣ ಪತ್ರದ ಪ್ರತಿ.

5.3. ಪ್ರಸ್ತುತ ನಡೆಸುತ್ತಿರುವ ತಮ್ಮ ಸಂಸ್ಥೆಯ ಹೆಸರು, ವಿಳಾಸ, ಸಂಪರ್ಕ ವ್ಯಕ್ತಿಯ ವಿವರ ಹಾಗೂ ದೂರವಾಣಿ ಸಂಖ್ಯೆ ಒಳಗೊಂಡ ವಿವರಗಳುಳ್ಳ ತಃಖ್ತೆ

5.4. ಸರಬರಾಜು ಮಾಡುವ ವಸ್ತುಗಳ ಗುಣಮಟ್ಟದ ಪ್ರಮಾಣ ಪತ್ರ (ISO Certificate)

5.5. ಬಿಡ್‌ದಾರರ/ಸಂಸ್ಥೆಯ ಪ್ಯಾನ್‌ಕಾರ್ಡ್ (PAN Card) ಪ್ರತಿ.

5.6. ಬಿಡ್‌ದಾರರು / ಪಾಲುದಾರ ಸಂಸ್ಥೆಯ ಪರವಾಗಿ ಬಿಡ್ ಸಲ್ಲಿಸುತ್ತಿದ್ದಲ್ಲಿ ಸದರಿ ಬಿಡ್ ಸಲ್ಲಿಸಲು ಆಯಾ ಸಂಸ್ಥೆಗಳಿಂದ ಪಡೆದಿರುವ ಅಧಿಕಾರ ಪತ್ರದ ದೃಡೀಕೃತ ಪ್ರತಿ.

5.7. ಕಳೆದ 5 ವರ್ಷಗಳಲ್ಲಿ ಬಿಡ್‌ದಾರರು ಅಥವಾ ಸಂಸ್ಥೆಯು ಕಪ್ಪುಪಟ್ಟಿಗೆ ಸೇರಿಲ್ಲ ಮತ್ತು ಸಲ್ಲಿಸಲಾಗುವ ಬಿಡ್‌ಅನ್ನು ಹಿಂಪಡೆಯುವುದಿಲ್ಲ ಎಂಬುದರ ಬಗ್ಗೆ ಸ್ವ-ದೃಢೀಕರಣ ಪತ್ರ.

**6.0 ಆರ್ಥಿಕ ಬಿಡ್ ವಿಭಾಗದಲ್ಲಿ ಸಲ್ಲಿಸಬೇಕಾದ ದಾಖಲೆಗಳು:-**

6.1. ಅನುಬಂಧ-1ರಲ್ಲಿ ನಮೂದಿಸಿರುವ ಕಿಟಕಿ/ಬಾಗಿಲು ಪರದೆಗಳು ಮತ್ತು ಕುಷನ್‌ಗಳು ಮತ್ತು ಕುಷನ್ ಕವರ್‌ಗಳ ದರವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಬೇಕು.

**7. ಟೆಂಡರ್ ತೆರೆಯುವುದು:**

7.1 ಇ-ಪ್ರಕ್ಯೂರ್‌ಮೆಂಟ್ ಡಾಕ್ಯುಮೆಂಟ್‌ನಲ್ಲಿ ನಿಗಧಿ ಪಡಿಸಿದ ದಿನಾಂಕದಂದು ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ತುರವರು ಪರಿಶೀಲನಾ ಸಮಿತಿಯ ಸದಸ್ಯರ ಸಮಕ್ಷಮ ತಾಂತ್ರಿಕ ಬಿಡ್‌ಗಳನ್ನು ತೆರೆಯುವರು. ಸದರಿ ಬಿಡ್ ತೆರೆಯುವ ದಿನಾಂಕವು ಯಾವುದಾದರೂ ಸಾರ್ವತ್ರಿಕರಜಾ ದಿನವಾದಲ್ಲಿ ಮಾರನೆಯ ಕೆಲಸದ ದಿನ ತೆರೆಯಲಾಗುವುದು.

7.2 ಅದೇ ರೀತಿ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ನಿಗದಿತ ದಿನಾಂಕದಂದು ತೆರೆಯಲಾಗುವುದು.

**8) ಟೆಂಡರ್‌ಗಳ ಮೌಲ್ಯಮಾಪನ:-**

8.1 ನಿಗಧಿಪಡಿಸಿದ ದಿನಾಂಕದಂದು ತಾಂತ್ರಿಕ ಬಿಡ್ (Technical Bid) ತೆರೆಯಲಾಗುವುದು

8.2 ಎಲ್ಲಾ ಷರತ್ತುಗಳನ್ನು ಪೂರೈಸಿ ಎಲ್ಲಾ ಅವಶ್ಯ ದಾಖಲೆಗಳನ್ನು ಸಲ್ಲಿಸಿರುವ ಅರ್ಹ ಬಿಡ್‌ದಾರರ ಹೆಸರುಗಳನ್ನು ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಮೇರೆಗೆ ತೀರ್ಮಾನಿಸಲಾಗುವುದು.

8.3 ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಯಶಸ್ವಿ ಬಿಡ್‌ದಾರರನ್ನು ಆಯ್ಕೆ ಮಾಡಿ, ಲೆಟರ್ ಆಫ್ ಇಂಟೆಂಟ್ ಅನ್ನು ಅಂತಹ ಯಶಸ್ವಿ ಬಿಡ್‌ದಾರರಿಗೆ ನೀಡಲಿದೆ.

8.4 ಟೆಂಡರ್ ಪ್ರಕ್ರಿಯೆಯ ಮೇಲೆ ಪ್ರಭಾರ ಬೀರುವಂತಹ ಆಸೆ, ಆಮಿಷ, ಒತ್ತಡ ಇತ್ಯಾದಿ ಕ್ರಿಯೆಯಲ್ಲಿತೊಡಗುವ ಹಾಗೂ ಟೆಂಡರ್ ಉದ್ದೇಶವನ್ನು ವಿಫಲಗೊಳಿಸಲು ಸೇರಿದಂತೆ ಅನೈತಿಕ ಹಾಗೂ ಅಕ್ರಮ ಚಟುವಟಿಕೆಗಳಲ್ಲಿ ತೊಡಗುವ ಬಿಡ್‌ದಾರರನ್ನು ಅನರ್ಹರೆಂದು ಪರಿಗಣಿಸಲಾಗುವುದು.

## :- ಟೆಂಡರ್‌ದಾರರ ಗಮನಕ್ಕೆ :-

1. ಸಾಮಗ್ರಿಗಳ ದರಗಳು ತೆರಿಗೆ, ಸಾಗಾಣಿಕೆ ವೆಚ್ಚ ಇತ್ಯಾದಿಗಳನ್ನು ಒಳಗೊಂಡಿರಬೇಕು. (ಜಿ.ಎಸ್.ಟಿ. ಪ್ರತ್ಯೇಕವಾಗಿ ನಮೂದಿಸಬೇಕು)
2. ಟೆಂಡರ್‌ದಾರರು ಅನುಬಂಧ–1ರಲ್ಲಿ ನಮೂದಿಸಿರುವ ಎಲ್ಲಾ ಸಾಮಾಗ್ರಿ/ಬಟ್ಟೆಗಳಿಗೆ ದರವನ್ನು ಕಡ್ಡಾಯವಾಗಿ ನಮೂದಿಸಬೇಕು.
3. ಸಾಮಾಗ್ರಿಗಳನ್ನು ಸರಬರಾಜು ಮಾಡುವ ಹಂತದಲ್ಲಿ ಹಾನಿಯಾಗಿರುವುದು ಹಾಗೂ ಹರಿದಿರುವುದು ಕಂಡು ಬಂದಲ್ಲಿ ಬದಲಾವಣೆ ಮಾಡಿಕೊಡಲು ಬದ್ಧರಾಗಿರಬೇಕು.
4. ಸರಬರಾಜು ಮಾಡುವ ಸಾಮಗ್ರಿಗಳ ಬಗ್ಗೆ ಸಂಪೂರ್ಣ ವಿವರಣೆ ನಮೂದಿಸಿರಬೇಕು ಹಾಗೂ ಪ್ರಾಡಕ್ಟ್ ಕ್ಯಾಟಲಾಗ್‌ನ್ನು ಲಗತ್ತಿಸಿರಬೇಕು.
5. ಟೆಂಡರ್‌ದಾರರು ಪೂರ್ವಭಾವಿ ಸಭೆಗೆ ಹಾಜರಾಗುವಾಗ ಬಟ್ಟೆಗಳ ಮಾದರಿಯ ಸ್ಯಾಂಪಲ್‌ನೊಂದಿಗೆ ಹಾಜರಾಗುವುದು. ಹಾಜರಾಗಲು ಸಾಧ್ಯವಾಗದಿದ್ದಲ್ಲಿ ಬಟ್ಟೆಗಳ ಮಾದರಿಯನ್ನು ನಿಗಧಿತ ದಿನಾಂಕ ಹಾಗೂ ಸಮಯದಲ್ಲಿ ಸಂಪರ್ಕ ಅಧಿಕಾರಿಗಳಿಗೆ ಕಳುಹಿಸುವುದು.
6. ಅಪೂರ್ಣ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
7. ಯಾವುದೇ ಕಾರಣವನ್ನು ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಇವರು ಕಾಯ್ದಿರಿಸಿಕೊಂಡಿರುತ್ತಾರೆ. ಇವರ ನಿರ್ಣಯವೇ ಅಂತಿಮವಾಗಿರುತ್ತದೆ.

ಕಾರ್ಯದರ್ಶಿ.
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ-1

ಶಾಸಕರ ಭವನದ ಕೊಠಡಿಗಳ ಉಪಯೋಗಕ್ಕಾಗಿ ಶೇಕಡ 35% ಕಾಟನ್ ಹಾಗೂ 65% ಪಾಲಿಸ್ಟರ್‌ನ ಕಿಟಕಿ ಪರದೆ ಹಾಗೂ ಬಾಗಿಲ ಪರದೆ ಹಾಗೂ ಕುಷನ್ ಮತ್ತು ಕುಷನ್ ಕವರ್‌ಗಳನ್ನು ಸರಬರಾಜು ಮಾಡಲು ನಿರ್ಧಿಷ್ಟಪಡಿಸಲಾದ ಪ್ರಮಾಣ ಮತ್ತು ಅಳತೆಯ ವಿವರಗಳು ಈ ಕೆಳಕಂಡಂತಿರುತ್ತದೆ :-

| ಕ್ರಮ ಸಂಖ್ಯೆ | ಸಾಮಾಗ್ರಿಗಳ ವಿವರ | ಒಟ್ಟು ಸಂಖ್ಯೆ | ವಿಸ್ತೀರ್ಣ ಉದ್ದ ಮತ್ತು ಅಗಲ |
|---|---|---|---|
| 1 | ಬಾಗಿಲ ಪರದೆ<br>with fiber ring of size | 512 | 70” x 95” |
| 2 | ಕಿಟಕಿ ಪರದೆ<br>with fiber ring of size | 560 | 50”x60” |
| 3 | 3 ಸೀಟಿನ 82 ಸೋಫಾ ಸೆಟ್‌ಗೆ ಕುಷನ್ ಮತ್ತು ಕುಷನ್ ಕವರ್ | 492 | 20 1\2” x24”<br>&<br>16”x21” |
| 4 | 1 ಸೀಟಿನ 167 ಸೋಫಾ ಸೆಟ್‌ಗೆ ಕುಷನ್ ಮತ್ತು ಕುಷನ್ ಕವರ್ | 334 | 20 1\2” x24”<br>&<br>16”x21” |

ಕಾರ್ಯದರ್ಶಿ.
ಕರ್ನಾಟಕ ವಿಧಾನ ಪರಿಷತ್ತು